## ಪಾಠ 5

## ಸಭೆ:

# ಅದರ ಸ್ಥಾಪನೆ (2)

**ಯೋಹಾನನಿಂದ ದಿವಾರೋಹಣದ ವರೆಗೆ ದೇವರ ರಾಜ್ಯ**

1. ಸಭೆ ಮತ್ತು ದೇವರ ರಾಜ್ಯ ಒಂದೇ ಸಂಸ್ಥೆಯೋ (ಮತ್ತಾಯ 16:18: 19)?
   ಕರ್ತನ ಮೇಜು ಎಲ್ಲಿರಬೇಕಾಗಿತ್ತು (ಲೂಕ 22:29, 30)? ಆದರೆ ಕೊರಿಂಥದಲ್ಲಿ ಅದು ಎಲ್ಲಿ ಇತ್ತು (1 ಕೊರಿಂಥ 11:18-22)?
2. ದೇವರ ರಾಜ್ಯವು ಹತ್ತಿರವಾಗಿದೆ ಎಂದು ಯಾರು ಪ್ರಸಂಗಿಸಿದರು (ಮತ್ತಾಯ 3:1, 2)?
3. ಕ್ರಿಸ್ತನು ತನ್ನ ಪ್ರಸಂಗವನ್ನು ಹೇಗೆ ಪ್ರಾರಂಭಿಸಿದನು (ಮತ್ತಾಯ 4:17)?
4. ತಮ್ಮ ಮಿತಿಯುಳ್ಳ ಸೇವೆಯಲ್ಲಿ ಅಪೊಸ್ತಲರು ಹೇಗೆ ಪ್ರಸಂಗಿಸಿದರು (ಮತ್ತಾಯ 10:7)?
5. ದೇವರ ರಾಜ್ಯದ ಮೇಲೆ ಎಪ್ಪತ್ತು ಜನರ ಸಂದೇಶ ಏನಾಗಿತ್ತು (ಲೂಕ 10:9)?
6. ಪ್ರಾರ್ಥಿಸಲು ಶಿಷ್ಯರು ಹೇಗೆ ಕಲಿಸಲ್ಪಟ್ಟರು (ಮತ್ತಾಯ 6:10)?
7. ಕೊನೆಯ ಭೋಜನದಲ್ಲಿ ದೇವರ ರಾಜ್ಯದ ಬಗ್ಗೆ ಯೇಸು ಏನು ಹೇಳಿದನು (ಲೂಕ 22:18)?
8. ಸಾಯುತ್ತಿದ್ದ ಕಳ್ಳನ ಅಂತಿಮ ಬೇಡಿಕೆ ಯಾವುದು (ಲೂಕ 23:42)?
9. ದಿವಾರೋಹಣಕ್ಕಿಂತ ಮೊದಲು, ಅದರ ಪುನಃಸ್ಥಾಪನೆಯ ಬಗ್ಗೆ ಯಾರು ಕೇಳಿದರು (ಅಪೊಸ್ತಲರ ಕೃತ್ಯಗಳು 1:6)? ಆದುದರಿಂದ, ಈ ಸಮಯಕ್ಕಿಂತ ಮೊದಲು ದೇವರ ರಾಜ್ಯವು ಸ್ಥಾಪಿಸಲ್ಪಟ್ಟಿತೋ?

## ಸಾರಾಂಶ

| ದೇವರ ರಾಜ್ಯ ಮೊದಲು.............. | ಮತ್ತು...... | ಪಂಚಾಶತ್ತಮದ ನಂತರ |
|---|---|---|
| "ಸಮೀಪವಾಯಿತು" | | ದೇವರ ರಾಜ್ಯದ ಭಾಗ, ಪ್ರಕಟನೆ 1:6 |
| "ಹತ್ತಿರವಾಗಿದೆ" | | ರಾಜ್ಯದೊಳಗೆ ಸೇರಿಸಿದನು, ಕೊಲೊಸ್ಸೆ 1:13, 14 |
| "ಬಳಿಯಲ್ಲಿದೆ" | | ರಾಜ್ಯವು ಅನುಗ್ರಹಿಸಲಟ್ಟಿತು, ಅಪೊಸ್ತಲರ ಕೃತ್ಯಗಳು 2:30 |
| "ಬರುವುದು" | ಪಂಚಾಶತ್ತಮ ದಿನ | ಬಲದಿಂದ ಬಂದಿತು, ಅಪೊಸ್ತಲರ ಕೃತ್ಯಗಳು 2:1-4 |
| "ಅದಕ್ಕಾಗಿ ನೋಡುತ್ತಿರುವುದು" | | 3000 ಪ್ರಜೆಗಳು, ಅಪೊಸ್ತಲರ ಕೃತ್ಯಗಳು 2:38, 41 |
| "ಕಟ್ಟುವರು" | | ಯೆರೂಸಲೇಮಿನಲ್ಲಿ ಕಟ್ಟಲ್ಪಟ್ಟಿತು, ಅಪೊಸ್ತಲರ ಕೃತ್ಯಗಳು 2:47; 8:1; 11:22 |

**ಯೇಸು ಮತ್ತು ಸಭೆ**

1. ಆತನ "ವಾಗ್ದಾನ" ಕೆಳಗೆ ಪಟ್ಟಿ ಮಾಡಿದ ಸಂಗತಿಗಳನ್ನೂ ಮತ್ತು "ನೆರವೇರಿಕೆ"ಯ ಕೆಳಗಿನ ಉಲ್ಲೇಖಗಳನ್ನು ಓದಿರಿ ಮತ್ತು ಹೋಲಿಸಿರಿ.

**ಆತನ ವಾಗ್ದಾನ (ಮತ್ತಾಯ 16:16-19)......ಮತ್ತು.....ನೆರವೇರುವಿಕೆ (ಅಪೊಸ್ತಲರ ಕೃತ್ಯಗಳು 2:14-41)**

| | | |
|---|---|---|
| 1—ಕಟ್ಟುವೆನು | | 1—ಕಟ್ಟಲ್ಪಟ್ಟಿತು - ಸ್ಥಾಪಿಸಲ್ಪಟ್ಟಿತು, 2:30, 47 |
| 2—ಬಂಡೆಯ ಮೇಲೆ - ಸತ್ಯ | | 2—ಕರ್ತನು ಹಾಗೂ ಕ್ರಿಸ್ತನು, 2:36 |
| 3—ಪೇತ್ರನಿಗೆ ಬೀಗದ ಕೈಗಳು | **ಪಂಚಾಶತ್ತಮ ದಿನ** | 3—ಪೇತ್ರನು ಬೀಗದ ಕೈಗಳನ್ನು ಉಪಯೋಗಿಸಿದನು, 2:36-41 |
| 4—ಪೇತ್ರನು ಕಟ್ಟುವನು | | 4—ಎಲ್ಲಾ ಜನರ ಮೇಲೆ ಬಂಧಿಸಲ್ಪಟ್ಟ ಮಾತುಗಳು, 2:36-41 |
| 5—ಪೇತ್ರನು ಬಿಚ್ಚುವನು | | 5—3000 ಜನರು ಬಿಚ್ಚಲ್ಪಟ್ಟರು, 2:38, 41 |

**2. ಹಾಗಾದರೆ ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:1).**

## ಪ್ರಬಲವಾಗಿ ಬರಲಿಕ್ಕಿದ್ದ ದೇವರ ರಾಜ್ಯ

**1. ಕೆಳಗೆ ಪಟ್ಟಿ ಮಾಡಿದ "ಮುಂತಿಳಿಸುವಿಕೆ"ಯ ವಿಭಜನೆಯನ್ನು ಓದಿರಿ, ಮತ್ತು ಅಪೊಸ್ತಲರ ಕೃತ್ಯಗಳಲ್ಲಿಯ ಉಲ್ಲೇಖಗಳಿಂದ ಅದು ಹೇಗೆ ನೆರವೇರಿತು ಎಂಬುದನ್ನು ತೋರಿಸಿರಿ.**

**ಮುಂತಿಳಿಸುವಿಕೆ (ಮಾರ್ಕ 9:1)............ಮತ್ತು......ನೆರವೇರುವಿಕೆ (ಅಪೊಸ್ತಲರ ಕೃತ್ಯಗಳು 2:1-4)**

| | | |
|---|---|---|
| 1—ಬರಲಿರುವ ಪ್ರಭಾವ | | 1—ಪ್ರಭಾವವು ಬಂದಿತು, 2:1-4 |
| 2—ರಾಜ್ಯವು ಬಲದೊಂದಿಗೆ ಬರಲಿರುವುದು | | 2—ರಾಜ್ಯವು ಪ್ರಾರಂಭಿಸಲ್ಪಟ್ಟಿತು, 2:30 |
| 3—ಅದನ್ನು ನೋಡಲು ಕೆಲವರು ಜೀವಿಸಿರುವರು | **ಪಂಚಾಶತ್ತಮ ದಿನ** | 3—ಕೆಲವರು ಜೀವಿಸುತ್ತಿದ್ದರು, 2:14 |
| 4—ಮೊದಲು ಕೆಲವರು ಸತ್ತು ಹೋಗುವರು | | 4—ಯೂದನು ಸತ್ತು ಹೋಗಿದ್ದನು, 1:16-18 |

**2. ಹಾಗಾದರೆ ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:1)?**

## ಸಭೆಯ ಅಸ್ತಿತ್ವಕ್ಕೆ ಐದು ಅವಶ್ಯಕವಾದ ಅಂಶಗಳು

**1. ಸುವಾರ್ತೆಯ ಮೂರು ಮೂಲ ಘಟನೆಗಳು: ಅವುಗಳನ್ನು ಹೇಳಿರಿ (1 ಕೊರಿಂಥ 15:3, 4). ಕ್ರಿಸ್ತನು ಎಬ್ಬಿಸಲ್ಪಡದಿದ್ದರೆ, ಅದರಿಂದ ಬರುತ್ತಿದ್ದ ಏಳು ಕೆಡುಕುಗಳನ್ನು ಹೇಳಿರಿ (1 ಕೊರಿಂಥ 15:13-19).**

**2. ನಾಲ್ಕನೆಯ ಅವಶ್ಯಕತೆ: ಯಾವ ಹೆಸರಿನಲ್ಲಿ ಪಾಪಪರಿಹಾರ ಇದೆ (ಲೂಕ 24:47ಎ; ಅಪೊಸ್ತಲರ ಕೃತ್ಯಗಳು 2:38)?**

**3. ಐದನೆಯ ಅವಶ್ಯಕತೆ: ಪರಿಶುದ್ಧಾತ್ಮನು ಏನು ಮಾಡುವನು (ಯೋಹಾನ 14:26; 16:8, 13)?**

a. ಈ ಐದು ಅವಶ್ಯಕ ಅಂಶಗಳು ಎಲ್ಲಿ ಪ್ರಾರಂಭವಾಗುವವು (ಲೂಕ 24:46, 47)?

b. ಶಿಷ್ಯರು ಈ ಸಂಗತಿಗಳನ್ನು ಯಾವಾಗ ಸಾರಬೇಕು (ಲೂಕ 24:48, 49)?

(1) ಕ್ರಿಸ್ತನು ಜೀವಿಸಿದ್ದಾಗ, ಈ ಸಂಗತಿಗಳು ಯಾಕೆ ಸಾರಲ್ಪಡಲಿಕ್ಕಾಗಲಿಲ್ಲ?
ಅವು ಘಟನೆಗಳಂತೇ ಸಂಭವಿಸಿದ್ದಿಲ್ಲ; ಮೊದಲು ಅವು ಘಟನೆಗಳಾಗತಕ್ಕದ್ದು. ಯೇಸುವು ಅವರಿಗೆ ಕಾಣಿಸಿಕೊಳ್ಳುವವರೆಗೆ ಶಿಷ್ಯರಲ್ಲಿ ಒಬ್ಬನಾದರೂ ಆತನು ಸತ್ತವರೊಳಗಿಂದ ಎಬ್ಬಿಸಲ್ಪಡುವನು ಎಂಬುದನ್ನು ನಂಬಿರಲಿಲ್ಲ. ಈ ಕೆಳಗಿನ ರುಜುವಾತನ್ನು ಗಮನಿಸಿರಿ:

(2) ಶಿಷ್ಯರು ಪುನರುತ್ಥಾನದ ವಾರ್ತೆಯನ್ನು ಸ್ವೀಕರಿಸಿದರು (ಮಾರ್ಕ 16:11, 14)?

(3) ತೋಮನು ಮೊದಲು ವಾರ್ತೆಯನ್ನು ಹೇಗೆ ಸ್ವೀಕರಿಸಿದನು (ಯೋಹಾನ 20:24, 25)? ಆದುದರಿಂದ, ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತು?
ಹಿಂದೆ ಹೇಳಿದ ಐದು ಅವಶ್ಯಕ ಅಂಶಗಳು ಘಟನೆಗಳಾದಾಗ - ಸ್ಥಾಪಿಸಲ್ಪಟ್ಟ ಘಟನೆಗಳಾದಾಗ ಅದು ಸ್ಥಾಪಿಸಲ್ಪಟ್ಟಿತು.

c. ಪೇತ್ರನ ಪ್ರಥಮ ಪ್ರಸಂಗದಲ್ಲಿ ಐದು ಅವಶ್ಯಕ ಅಂಶಗಳನ್ನು ಕಂಡುಕೊಳ್ಳಿರಿ (ಅಪೊಸ್ತಲರ ಕೃತ್ಯಗಳು 2:4, 23, 24, 32, 33, 38). ಹಾಗಾದರೆ ಯಾವ ದಿನದಂದು ಸಭೆಯು ಸ್ಥಾಪಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:1)?

© 2009 Truth for Today